4) ರಾಜ್ಯದಲ್ಲಿ ಅನಧಿಕೃತ ಕಟ್ಟಡಗಳನ್ನು ಅಧಿಕೃತಗೊಳಿಸುವುದು.

SRI. A.M. HINDUSGERI (HUBLI): Sir, the Cabinet had decided in its meeting on 20.8.1990 to regularise all unauthorised constructions in the State. But so far no Notifications or Government Orders have been issued for regularisation of such unauthorised constructions.

I would like to know from the Government, what action has been taken to regularise the unauthorised constructions in the State and when the orders would be issued.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಸಭಾದ್ಯಕ್ಷಿಣಿಯವರೇ, ಈ ವಿಚಾರದಲ್ಲಿ ಈಗಾಗಲೇ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದೆ. ಈ ಒಂದು ಅಧಿವೇಶನದಲ್ಲಿ ಆ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ

5) ಕೆ.ಪಿ.ಎಸ್.ಸಿ.ಯಿಂದ ಆಯ್ಕೆಯಾದ ವೈದ್ಯಾಧಿಕಾರಿಗಳಿಗೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ

SRI. R.V. DESHAPANDE : The K.P.S.C. has selected candidates for the posts of Insurance Medical Officers in E.S.I Dispensaries/ Hospitals and also prepared an additional list of selected candidates. Out of 200 candidates slected by KPSC, appointment orders were issued to only 180 doctors and in respect of 20 doctors, it was withheld for want of production of documents. Even out of 180 doctors, only 130 doctors are at present working and some others are on unauthorised absence. Therefore, there are number of vacancies and I request the Hon'ble Minister for Labour to issue appoinment orders to all those 20 candiates selected in the year 1989 by KPSC and who are in the additional list of whom most of them belongs to SC and other backward candidates.

SRI AZEEZ SAIT (Min. Transport and wakfs) : I will bring it to the notice of the Labour Minsiter about appointment of Doctors in ESI.

6) ಬೆಂಗಳೂರಿನ ಹೆಚ್.ಆರ್.ಬಿ.ಆರ್. ಬಡಾವಣೆಗೆ ನಗರ ಸಾರಿಗೆ ಸಾರಿಗೆ ಸೌಕರ್ಯ ಒದಗಿಸುವ ಬಗ್ಗೆ.

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ): ಹೆಚ್.ಆರ್.ಬಿ.ಆರ್. ಬಡವಾಣೆಯ ಒಂದನೆಯ ಬ್ಲಾಕ್‌ನಲ್ಲಿ ಶೇ. 50ಕ್ಕೂ ಹೆಚ್ಚು ನಿವೇಶನದಾರರು ಮನೆಗಳನ್ನು ನಿರ್ಮಿಸಿದ್ದು ಬಡಾವಣೆಯಲ್ಲಿನ ನಿವಾಸಿಗಳಿಗೆ ನಗರಸಾರಿಗೆ ಬಸ್ಸು ಸೌಲಭ್ಯವಿಲ್ಲದೆ ಹಾಗೂ ಮಾರುತಿ ಸೇವಾನಗರದಿಂದ ಈ ಬಡಾವಣೆಗೆ 3-4 ಕಿ.ಮೀ. ದೂರವಿರುವುದರಿಂದ ರಾತ್ರಿ ವೇಳೆಯಲ್ಲಿ ಹೆಂಗಸರು ಮತ್ತು ಮಕ್ಕಳಿಗೆ ಓಡಾಡಲು ತುಂಬಾ ತೊಂದರೆಯಾಗಿರುವುದರಿಂದ ಈ ಮೇಲಿನ ಬಡಾವಣೆಗೆ ನಗರ ಸಾರಿಗೆ ಬಸ್ಸು ಸೌಲಭ್ಯವನ್ನೊದಗಿಸುವಂತೆ ಕೋರುತ್ತೇನೆ. ಹಾಗೂ ನಗರಸಾರಿಗೆ ಬಸ್ಸು ಮಾರ್ಗದ ಸಂಖ್ಯೆ 137 ಡಿಯನ್ನು ಹೆಚ್.ಎ.ಎಲ್. 2ನೇ ಹಂತದಿಂದ ಹೆಚ್.ಆರ್.ಬಿ.ಆರ್. ಬಡಾವಣೆಯ ಮೊದಲನೆ ಬಡಾವಣೆಗೆ ವಿಸ್ತರಿಸುವುದರ ಮೂಲಕ ಶಾಲಾವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸಲು ಕೋರಲಾಗಿದೆ.

SRI AZEEZ SAIT : (Min. Transport and wokfs) Madam Deputy speaker.

Hennur Banaswadi layout has been formed by the Bangalore Development Authority recently. Only a few houses have come up in the first block. A major portion of residential area is still to be developed.

To meet the present need of the residents, the B.T.S. Division of KSRTC is operating Sub-Urban Services on the following routes to Hennur Banasawadi lay out.

	Route No.	*From*	*To*	*No. fo trips*
1.	302-C	K.R.Market	Hennur-Banaswadi Layout via Shivaganagar	14 trips
2.	302-B	Bangalore Bus Station	Babasaheb Palya Via Maruthisevanagar and Hennur - Banaswadi Layout.	16 trips
3.	252-B	Peenya II Stage	Hennur-Banaswadi Layout via-J.C.Nagar, 10th Depot	8 trips
4.	302-E	K.R.Market	Chelakere via Shivajinagar Kammanahalli.	15 trips

In addition to the above a number of other services are also being operated from City Market, Shivajinagar and Bangalore Bus Station to Banasawadi, Ramamurthy Nagar and Channasandra as detailed below:

	Route No.	*From*	*To*	*No. fo trips*
1.	300(4 Sohs.)	Shivajinagar	Banaswadi	86 trips.
2.	300-A(1 Sch.)	Uttarahalli	Banasawadi	9 trips.
3.	300-B(1 Sch.)	Bangalore Bus Station	Banaswadi	16 trips.
4.	300-E(2 Sch.)	Shivajinagar	Ramamurthinagar	36 trips.
5.	300-F(1 Sch.)	Shivajinagar	Devasandra	15 trips.
6.	301-A(1 Sch.)	K.R. Market	Banswadi	16 trips.
7.	301-A(1 Sch.)	K.R. Market	Channasandra	14 trips.
8.	303(1 SCh.)	K.R. Marekt	Banswadi	14 trips.

These services are also party catering to the needs of the residents of in Hennur-Banswadi Layout First Block. The II Block of Hennur-Banswadi Layout is being catered to by 4 buses on the route Shivajinagar-Kammanhalli and 2 buses on the route Bangalore Bus Station to Kammanahalli.

The existing services which are being operated as above are adequately catering to the needs of the Hennur Banswadi Layout I Blockj and II Block. The Services on the routes No. 137-D are being operated between H.A.L. III Stage and Periyar Nagar Circle via H.A.L. II Stage, Ulsoor, Ajantha Talkies, Cox Town Circle, Pulikeshinagar. This is a City Services.

The Hennur-Banaswadi Layout is located outside the Corporation limits. As such the services cannot be extended. If it is extended, it gets converted slightly higher than the City Services. Therefore, it is not feasible to extend the services on Route No. 137-D to Hennur-Banswadi Layout.

ನೀವು ಕೇಳಿದ ಮೇಲೆ ಹೆಣ್ಣೂರುಬಾಣಸವಾಡಿ ಲೇಔಟ್ ಏನಿದೆ ಅದು ಇನ್ನೂ ಬಿ.ಡಿ.ಎ.ನವರ ಹತ್ತಿರವೇ ಇರುವುದರಿಂದ ಅವರು ಈ ಲೇಔಟನ್ನು ಕಾರ್ಪೊರೇಷನ್‌ಗೆ ಹ್ಯಾಂಡ್‌ಓವರ್ ಮಾಡಿದ ಮೇಲೆ ಅದು ಸಿಟಿ ಲಿಮಿಟ್‌ಗೆ ಬರುತ್ತದೆ. ಆಗ ಸಿಟಿ ಸರ್ವಿಸಸ್ ಅನ್ನು ಹೆಚ್ಚು ಮಾಡಬಹುದು.

7) **ಬೈಲಹೊಂಗಲಕ್ಕೆ ಕುಡಿಯುವ ನೀರಿನ ಸೌಕರ್ಯದ ಬಗ್ಗೆ.**

ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪಾಧ್ಯಕ್ಷೆಯವರೆ, ಬೆಳಗಾಂ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಕುಡಿಯುವ ನೀರಿನ ತೊಂದರೆ ಬಹಳವಾಗಿದೆ. ಎಕ್ಸ್‌ಟೆನ್‌ಷನ್ ಏರಿಯಾದಲ್ಲಿ ವಾರದಲ್ಲಿ ಒಮ್ಮೆ ಕೂಡ ನೀರು ಸಿಕ್ಕುವುದಿಲ್ಲ, ಆದಕಾರಣ ಕೂಡಲೇ ಅಲ್ಲಿ 25 ಕೊಳವೆಬಾವಿಗಳನ್ನು ತೋಟಲು ಆದೇಶ ನೀಡಬೇಕೆಂದು ನಾನು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನಸೆಳೆಯಬಯಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷೆಯವರೆ, ಬೈಲಹೊಂಗಲ ಪಟ್ಟಣದ ಜನಸಂಖ್ಯೆಯು 1981ರ ಜನಗಣತಿಯ ಪ್ರಕಾರ 26, 465 ಆಗಿದ್ದು ಈಗಿನ ಜನಸಂಖ್ಯೆ ಸುಮಾರು 35,000 ಇರುತ್ತದೆ. ಈ ಪಟ್ಟಣಕ್ಕೆ ಹಾಲಿ ನೀರು ಸರಬರಾಜನ್ನು ಮಲಪ್ರಭಾ ನದಿಯಿಂದ ಮಾಡಲಾಗುತ್ತಿದೆ. ಹಾಲಿ ದಿನ ಪ್ರತಿ ತಲಾ 70 ಲೀಟರ್‌ನಂತೆ (15 ಗ್ಯಾಲನ್) ನೀರು ಸರಬರಾಜು ಮಾಡಲಾಗುತ್ತಿದೆ. ಎಕ್ಟೆನ್ಷನ್ ಏರಿಯಾಗಳಲ್ಲಿ ನೀರಿನ ಸಂಗ್ರಹಣಾಗಾರಗಳು ಮತ್ತು ಪೈಪ್‌ಲೈನ್ ಇರುವುದಿಲ್ಲ, ಈ ಏರಿಯಾಗಳಿಗೆ ನೀರಿನ ಜಲಾಗಾರಗಳನ್ನು ಮತ್ತು ಪೈಪ್‌ಲೈನ್‌ಗಳನ್ನು ಸರ್ಕಾರ ಮಾರ್ಚ್ 1990ರಲ್ಲಿ ಮಂಜೂರಾತಿ ನೀಡಿರುವ 80 ಲಕ್ಷ ರೂ.ಗಳ ಹೊಸ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಾಡಲಾಗುತ್ತಿದೆ. ಈ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಈ ಪಟ್ಟಣದಲ್ಲಿ 29 ಕೊಳವೆಬಾವಿಗಳಿದ್ದು, 25 ಕೊಳವೆಬಾವಿಗಳು ಸಹ ಕೆಲಸ ಮಾಡು ಕೆಲಸಮಾಡುತ್ತಿವೆ. 22 ಕೊಳವೆಬಾವಿಗಳಿಗೆ ಕೈ ಪಂಪುಗಳನ್ನು ಮತ್ತು 3 ಕೊಳವೆ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪುಗಳನ್ನೂ ಅಳವಡಿಸಲಾಗಿದೆ. ಇತ್ತೀಚೆಗೆ ಬೆಳಗಾಂನ ಜಿಲ್ಲಾಧಿಕಾರಿಗಳು 4 ಕೊಳವೆ ಬಾವಿಗಳನ್ನ ಬೈಲಹೊಂಗಲ ಪಟ್ಟಣದಲ್ಲಿ ಕೊರೆಯಲು ಮಂಜೂರು ಮಾಡಿರುತ್ತಾರೆ. ಏಟೆನ್ಷನ್ ಏರಿಯಾದಲ್ಲಿ ನೀರಿನ ಅಭಾವವನ್ನು ನೀಗಿಸಲು ಇನ್ನೂ ಹೆಚ್ಚಿನ ಕೊಳವೆಬಾವಿಗಳನ್ನು ಮಂಜೂರು ಮಾಡಲು ಇದೂ